

ಜಲಾಲಾಬಾದ್ ಸೇನಾ ಶಿಬಿರದ ಎದುರು ಸಮರಕ್ಕೆ ಸಜ್ಜಾಗಿರುವ ಶಸ್ತ್ರಸಜ್ಜಿತ ಹೆಲಿಕಾಪ್ಟರ್‌ಗಳು ಮತ್ತು ಟ್ರಕ್‌ಗಳು.

# ಅನುಭವ ಕಥನ

ಅಫ್ಘಾನಿಸ್ತಾನದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬುಡಮೇಲು ಮಾಡಿ, ತಾಲಿಬಾನ್ ಉಗ್ರರು ಅಧಿಕಾರವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡಿದ್ದರು. 2001ರಲ್ಲಿ ಅಮೆರಿಕ ನೇತೃತ್ವದ 'ಅಂತರರಾಷ್ಟ್ರೀಯ ಭದ್ರತಾ ನೆರವು ಪಡೆ' (ಐಎಸ್ಎಎಫ್) ತಾಲಿಬಾನ್ ಸರ್ಕಾರವನ್ನು ಉರುಳಿಸಿ, ಹಮೀದ್ ಕರ್ಜೈ ನಾಯಕತ್ವದಲ್ಲಿ ಮಧ್ಯಂತರ ಸರ್ಕಾರ ರಚಿಸಿತು. ನೂತನ ಆಡಳಿತಕ್ಕೆ ಭದ್ರತೆ ನೀಡಲು ಅಮೆರಿಕ, ಬ್ರಿಟನ್ ಸೇರಿದಂತೆ ಯೂರೋಪಿನ ಕೆಲವು ರಾಷ್ಟ್ರಗಳ ಸೇನಾ ಒಕ್ಕೂಟ ಮುಂದೆ ಬಂದಿತು. ಆಗ ಭಯೋತ್ಪಾದಕರು ಮತ್ತು ಪ್ರಜಾರಾಜ್ಯ ಸ್ಥಾಪಿಸಿದ ಭದ್ರತಾ ಸೇನೆಯ ನಡುವೆ ಕದನ ದೀರ್ಘಕಾಲ ನಡೆಯಿತು. 2013ರಲ್ಲಿ ಆ ಕಾರ್ಯಚರಣೆಯ ಫೋಟೊವರದಿಯನ್ನು ಮಾಡುವ ಅವಕಾಶ ನನ್ನದಾಗಿತ್ತು. ಯುದ್ಧದ ವರದಿಗಾರಿಕೆಯ ಆ ಅನುಭವ ಹೇಗಿತ್ತು ಹಾಗೂ ಆ ಕಾರ್ಯಾಚರಣೆಗೆ ಮಾಡಿಕೊಂಡಿದ್ದ ಸಿದ್ಧತೆಗಳನ್ನು ನೆನಪಿಸಿಕೊಂಡರೆ, ಈಗಲೂ ಮೈ ನವಿರೇಳುತ್ತದೆ.

ಅಲ್‌ಖೈದಾ ಮತ್ತು ತಾಲಿಬಾನ್ ಭಯೋತ್ಪಾದಕ ಸಂಘಟನೆಗಳ ನಿರ್ಮೂಲನೆ ಅಮೆರಿಕದ ಉದ್ದೇಶವಾಗಿತ್ತು. ಸುಮಾರು ಎರಡು ದಶಕಗಳ ಆ ಕಾರ್ಯಾಚರಣೆಯಲ್ಲಿ, ಕೆಲವು ದಿನಗಳ ಕಾಲ ನಾನು ಅಮೆರಿಕ ಸೇನೆಯೊಂದಿಗೆ ಕೆಲಸ ಮಾಡಿದ್ದು ಈಗ ಅಮೂಲ್ಯ ನೆನಪು. ಕರ್ನಾಟಕದಿಂದ ಕಂದಾಹಾರ್‌ಗೆ ಹಾರಿದಾಗಿನ ಕೌತುಕ ಮತ್ತು ಆತಂಕ ಬೆರೆತಿದ್ದ ಆ ಕ್ಷಣ ಈಗಲೂ ಕಣ್ಣಿನಲ್ಲಿ ಅಚ್ಚೊತ್ತಿದಂತಿದೆ. ನನ್ನ ಪ್ರಯಾಣ ಶುರುವಾದುದು 2013ರ ಏಪ್ರಿಲ್ ತಿಂಗಳಲ್ಲಿ. ಅಮೆರಿಕ ತನ್ನ ಕಾರ್ಯಾಚರಣೆಯನ್ನು ಜಗತ್ತಿಗೆ ತಿಳಿಸಲು, 'ಏಜೆನ್ಸಿ ಫ್ರಾನ್ಸ್ ಪ್ರೆಸ್' (ಎಎಫ್‌ಪಿ) ಜೊತೆ ಸಮಾಲೋಚಿಸಿ ವರದಿಗಾರರನ್ನು ನಿಯೋಜಿಸಿಕೊಂಡಿತ್ತು. ಒಬ್ಬರಿಗೆ ದೀರ್ಘಕಾಲ ಅಲ್ಲಿ ಕೆಲಸ ನಿರ್ವಹಣೆ ಸಾಧ್ಯವಿಲ್ಲದ ಕಾರಣ, ಆಗಾಗ ಸಿಬ್ಬಂದಿಯನ್ನು ಬದಲಾಯಿಸಲಾಗುತ್ತಿತ್ತು. ಹಾಗೆಯೇ ನನ್ನನ್ನೂ ನನ್ನ ಸಂಸ್ಥೆ ಅಫ್ಘಾನಿಸ್ತಾನಕ್ಕೆ 28 ದಿನಗಳ ಕಾಲ ಕಾರ್ಯನಿರ್ವಹಣೆಗೆ ನಿಯೋಜನೆ ಮಾಡಿತ್ತು.

## ಮೊದಲು ಆತ್ಮರಕ್ಷಣೆಯ ತಯಾರಿ

ಯುದ್ಧ ಅಥವಾ ಗಲಭೆ ಪೀಡಿತ ಪ್ರದೇಶದಲ್ಲಿ ಒಬ್ಬ ಪತ್ರಕರ್ತ ಸ್ವಯಂ ಸುರಕ್ಷತೆಯೊಂದಿಗೆ ಹೇಗೆ ತನ್ನ ಕೆಲಸವನ್ನು ಪರಿಣಾಮಕಾರಿಯಾಗಿ ನಿರ್ವಹಿಸಬೇಕು ಎನ್ನುವುದರೊಂದಿಗೆ ತರಬೇತಿ ಆರಂಭವಾಗುತ್ತದೆ. ನಮ್ಮ ಜೀವಕ್ಕೆ ಹಾನಿ ಆಗಬಾರದು, ನಮ್ಮ ಕೆಲಸದಿಂದ ಮತ್ತೊಂದು ಜೀವಕ್ಕೂ ತೊಂದರೆ ಆಗಬಾರದು ಎನ್ನುವ ಹಿನ್ನೆಲೆಯಲ್ಲಿ, ಆತ್ಮರಕ್ಷಣೆಯ ತಂತ್ರಗಾರಿಕೆಗೆ ಸಂಬಂಧಿಸಿದಂತೆ ಒಂದು ವಾರದ ತರಬೇತಿ ನೀಡಲಾಯಿತು. ಯುದ್ಧ ವರದಿಗಾರಿಕೆಗೆ ಹೋಗುವ ಪ್ರತಿಯೊಬ್ಬ ಪತ್ರಕರ್ತ ಮಾಡಲೇಬೇಕಾಗಿದ್ದ ಕಡ್ಡಾಯ ತರಬೇತಿಯದು. ಆ ತರಬೇತಿಯನ್ನು ನಾನು 2012ರಲ್ಲೇ ಮುಗಿಸಿದ್ದೆ. ಹಾಗಾಗಿ 2013ರಲ್ಲಿ ತಾಲಿಬಾನ್ ವಿರುದ್ಧದ ಕಾರ್ಯಾಚರಣೆಯ ವರದಿಗಾರಿಕೆಗೆ ಅವಕಾಶ ಸಿಕ್ಕಿತು.

ಬೆಂಗಳೂರಿನಿಂದ ಕಾಬೂಲ್‌ನಲ್ಲಿದ್ದ ನಮ್ಮ ಬ್ಯೂರೊ ಕಾರ್ಯಾಲಯ ತಲುಪಿ, ಅಲ್ಲಿಂದ ಅಮೆರಿಕನ್ ಸೇನೆಯ ಜೊತೆ ಸೇರಿದೆ. ಅಲ್ಲಿ ಅಂತರರಾಷ್ಟ್ರೀಯ ಭದ್ರತಾ ನೆರವು ಪಡೆಯ ಬೇರೆ ಬೇರೆ ತುಕಡಿಗಳಿದ್ದವು. ನಾನು ಅಮೆರಿಕದ ಸೇನೆ ಜೊತೆ ಕೆಲಸ ಮಾಡಬೇಕಾಯಿತು. ಆ ಕೆಲಸವನ್ನು 'ಎಂಬೆಡ್' (embed) ಎನ್ನುತ್ತಾರೆ;

